-1-

**ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ರವರನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಜ್ ಇಲಾಖೆ ವ್ಯಾಪ್ತಿಯಲ್ಲಿನ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಗೆ ಸ್ಥಳ ನಿಯುಕ್ತಿ ಮಾಡಿರುವ ಬಗ್ಗೆ ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಕೆ.ಜಿ.ಕುಮಾರಸ್ವಾಮಿ ಇವರ ನಿಯಮ-351ರ ಸೂಚನೆಗೆ ಉತ್ತರ.**

**ಉಲ್ಲೇಖ: ಪಟ್ಟಿ ಸಂಖ್ಯೆ: 5, ದಿನಾಂಕ: 12-02-2013, ಕ್ರಮ ಸಂಖ್ಯೆ: 2(40)**

***

ಲೋಕೋಪಯೋಗಿ ಇಲಾಖೆಯ ಸೇವೆಗೆ ಸೇರಿದ ಶ್ರೀ ಮೊಹಮ್ಮದ್ ಹುಸೇನ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರ ಸೇವೆಯನ್ನು ಲೋಕೋಪಯೋಗಿ ಇಲಾಖೆಯ ದಿನಾಂಕ: 29-08-2012ರ ಅಧಿಸೂಚನೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಶಕ್ಕೆ ನೀಡಲಾಗಿತ್ತು. ಸದರಿ ಅಧಿಕಾರಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 244 ಸೇಶಿಕಾ 2012, ದಿನಾಂಕ: 22-12-2012ರಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಶಿವಮೊಗ್ಗ ಇಲ್ಲಿ ಶ್ರೀ ಗಂಗಾನಾಯ್ಕ ಇವರ ಸ್ಥಾನಕ್ಕೆ ಸ್ಥಳ ನಿಯುಕ್ತಿಗೊಳಸಲಾಗಿದೆ, ಹಾಗೂ ಶ್ರೀ ಗಂಗಾನಾಯ್ಕ ಇವರನ್ನು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿಕ್ಕಬಳ್ಳಾಪುರ ಇಲ್ಲಿನ ಖಾಲಿ ಹುದ್ದೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ವರ್ಗಾಯಿಸಲಾಗಿದೆ.

ಶ್ರೀ ಗಂಗಾನಾಯ್ಕ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಮೇಲ್ಕಂಡ ವರ್ಗಾವಣೆ ಆದೇಶವನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿ ಅರ್ಜಿ ಸಂಖ್ಯೆ: 14/2013ರಲ್ಲಿ ಪ್ರಶ್ನಿಸಿದ್ದು, ಮಾನ್ಯ ನ್ಯಾಯಮಂಡಳಿಯು ದಿನಾಂಕ: 02-01-2013ರ ಮಧ್ಯಂತರ ಆದೇಶದಲ್ಲಿ ಈ ವರ್ಗಾವಣೆ ಆದೇಶಕ್ಕೆ ತಡೆಯಾಜ್ಞೆ ನೀಡಿ ಅವರನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಶಿವಮೊಗ್ಗ ಇಲ್ಲಿಯೇ ಮುಂದುವರೆಸಲು ನಿರ್ದೇಶಿಸಿದೆ. ಅದರಂತೆ, ಅವರು ಸದರಿ ಹುದ್ದೆಯಲ್ಲಿ ಮುಂದುವರೆದಿರುತ್ತಾರೆ. ಈ ಪ್ರಕರಣವು ಪ್ರಸ್ತುತ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಮುಂದೆ ಇದೆ.

12/02/2012

(ಕೆ.ಎಸ್.ಈಶ್ವರಪ್ಪ)
ಉಪ ಮುಖ್ಯಮಂತ್ರಿಗಳು

ಸಂಖ್ಯೆ: ಗ್ರಾಅಪ 54 ಜಿಪಅ 2013